# **ಕರ್ನಾಟಕ ಗೃಹ ಮಂಡಳಿ**

## **ಸೂರ್ಯನಗರ 1ನೇ ಹಂತದ ಬಡಾವಣೆಯ ಸೂರ್ಯ-ಎಲಿಗೆನ್ಸ್ ಬಹುಮಹಡಿ ಕಟ್ಟಡದ ಫ್ಲಾಟ್‌ಗಳ ಲಾಟರಿ ಕಾರ್ಯಕ್ರಮದ ಸಾರ್ವಜನಿಕ ಪ್ರಕಟಣೆ**

ಕರ್ನಾಟಕ ಗೃಹ ಮಂಡಳಿಯು ಬೆಂಗಳೂರಿನ ಸೂರ್ಯನಗರ 1ನೇ ಹಂತದ ಬಡಾವಣೆಯಲ್ಲಿ ಸೂರ್ಯ-ಎಲಿಗೆನ್ಸ್ ಸಮುಚ್ಚಯದಲ್ಲಿ ನಿರ್ಮಿಸಿರುವ ವಿವಿಧ ವರ್ಗದ ಫ್ಲಾಟ್‌ಗಳನ್ನು ಹಂಚಿಕೆ ಮಾಡುವ ಸಂಬಂಧ ದಿನಾಂಕಃ 07-03-2021 ರಂದು ಪತ್ರಿಕಾ ಪ್ರಕಟಣೆ ನೀಡಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿತ್ತು. ಸದರಿ ಸಾರ್ವಜನಿಕ ಪ್ರಕಟಣೆಗೆ ಅನುಗುಣವಾಗಿ ದಿನಾಂಕ: 20-09-2021 ರವರೆಗೆ ಅರ್ಜಿ ಸಲ್ಲಿಸಿರುವ ಅರ್ಜಿದಾರರುಗಳಿಗೆ **ದಿನಾಂಕಃ 24-09-2021 ರಂದು ಬೆಳಿಗ್ಗೆ 11-00 ಗಂಟೆಗೆ ಕರ್ನಾಟಕ ಗೃಹ ಮಂಡಳಿ ಆವರಣ, ಕಾವೇರಿ ಭವನ ಕೆ.ಜಿ. ರಸ್ತೆ, ಬೆಂಗಳೂರು** ಇಲ್ಲಿ ಇ-ಲಾಟರಿ ಮೂಲಕ ಹಂಚಿಕೆ ಮಾಡಲಾಗುವುದು.

ದಿನಾಂಕ: 21-09-2021 ರಂದು ಸದರಿ ಅರ್ಹ ಅರ್ಜಿದಾರರ ಪಟ್ಟಿಯನ್ನು ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ ಮತ್ತು ಸೂರ್ಯನಗರ 1ನೇ ಹಂತದ ಕಛೇರಿಯ ನಾಮಫಲಕದಲ್ಲಿ ಹಾಗೂ ಮಂಡಳಿಯ ವೆಬ್‌ಸೈಟ್ www.khb.karnataka.gov.in ನಲ್ಲಿ ಪ್ರಕಟಿಸಲಾಗುವುದು. ಆಕ್ಷೇಪಣೆಗಳೇನಾದರೂ ಇದ್ದಲ್ಲಿ ದಿನಾಂಕಃ **22-09-2021**ರ ಸಂಜೆ 5.00 ಗಂಟೆ ಒಳಗಾಗಿ ಖುದ್ದಾಗಿ ಉಪ ಪ್ರಧಾನ ವ್ಯವಸ್ಥಾಪಕರು(ಗ್ರಾಸೇ), ಕರ್ನಾಟಕ ಗೃಹ ಮಂಡಳಿ, 1ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಇಲ್ಲಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ಅಂತರಜಾಲ **https://www.khb.karnataka.gov.in** ಅನ್ನು ಸಂಪರ್ಕಿಸುವುದು.

ದಿನಾಂಕಃ 20-09-2021

ಸಹಿ/-
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು.